ಬೆಳಗಾವಿ ಜಿಲ್ಲಾ ಪರಿಷತ್‌ನಿಂದ ಕುಡಿಯುವ ನೀರಿನ ಯೋಜನೆಗೆ ಖರ್ಚು ಮಾಡಿದ ಹಣ

೪೯೪ (೭೭೩) ಶ್ರೀ ಚಂದ್ರಶೇಖರ್ ಮಾಮನಿ (ಸವದತ್ತಿ).—ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಬೆಳಗಾವಿ ಜಿಲ್ಲಾ ಪರಿಷತ್ತಿನಿಂದ ಈ ವರ್ಷ (೧೯೮೮-೮೯) ಕೇಂದ್ರ ಹಾಗೂ ರಾಜ್ಯ ವಲಯದ ವಿವಿಧ ಯೋಜನೆಯ ಕೆಳಗೆ ವಾಟರ್ ಸಪ್ಲೈ ಯೋಜನೆಗಳ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲಾಗಿದೆಯೆ, ಇವುಗಳಿಗೆ ಈಗಾಗಲೇ ಮೆಚ್ಚಿ ಮಾಡಿದ ಹಣವೆಷ್ಟು ಇವುಗಳಲ್ಲಿ ಪೂರ್ತಿಗೊಳಿಸಿದ ಯೋಜನೆಗಳೆಷ್ಟು ?

ಆ) ೧) ಮಿನಿವಾಟರ್ ಸಪ್ಲಾಯಿ

೨) ಎನ್. ಆರ್. ಡಬ್ಲ್ಯು ಎಸ್ ಮತ್ತು

೩) ಎ. ಆರ್. ಡಬ್ಲ್ಯು. ಎಸ್. ತಾಲ್ಲೂಕುವಾರು ಮಂಜೂರಾದ ಯೋಜನೆಗಳೆಷ್ಟು ?

ಇ) ಇವುಗಳಿಗೆ ಮೆಚ್ಚಿವಾದ ಹಣವೆಷ್ಟು ಹಾಗೂ ಪೂರ್ತಿಗೊಂಡ ಕೆಲಸಗಳೆಷ್ಟು ?

ಶ್ರೀ ಎಂ. ಪಿ. ಪ್ರಕಾಶ್.—(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ವಕ್ಫ್ ಮಂತ್ರಿಗಳು).—

ಅ) ಹೌದು

ರೂ.೩೮೩.೯೭ ಲಕ್ಷ
೪೬೮ ಯೋಜನೆಗಳು.

ತಿರುನೀರು ಯೋಜನೆ	ಎನ್. ಆರ್ ಡಬ್ಲ್ಯು ಎಸ್	ಎ. ಆರ್. ಡಬ್ಲ್ಯು ಎಸ್.
ಬೆಳಗಾವಿ ೯	೧೧	೨೪
ಕಾನಾಪುರ ೬	೧	೧೦
ಬೈಲಹೊಂಗಲ ೯	೯	೧೧
ಸವದತ್ತಿ ೧೪	೯	೧೫
ರಾಮದುರ್ಗ ೧೪	೩	೧೦
ಅಥಣಿ ೪	೧೨	೩೪
ಚಿಕ್ಕೋಡಿ ೪	೯	೩೭
ಗೋಕಾಕ್ ೪	೧೩	೧೯
ಹುಕ್ಕೇರಿ ೯	೮	೨೫
ರಾಯಬಾಗ್ ೧	೧೭	೧೪

ಮೆಚ್ಚಿವಾದ ಹಣ ರೂ.೨೯೪.೧೨ ಲಕ್ಷಗಳು ಪೂರ್ತಿಗೊಂಡ ಕೆಲಸ ೯೧

ಹೆಗ್ಗಡದೇವನ ಕೋಟೆ ಸರಗೂರು-ಮೊಳೆಯೂರು ರಸ್ತೆ

೧೯೫ (೮೦೭) ಶ್ರೀ ಎಂ. ಶಿವಣ್ಣ (ಹೆಗ್ಗಡದೇವನ ಕೋಟೆ).—ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಹೆಗ್ಗಡದೇವನಕೋಟೆ ತಾಲ್ಲೂಕು ಸರಗೂರು ಮೊಳೆಯೂರು ರಸ್ತೆ ಅತ್ಯಂತ ದುಃಸ್ಥಿತಿಯಲ್ಲಿರುವುದು ಸರಕಾರದ ಗಮನಕ್ಕೆ ಬಂದಿದೆಯೇ

ಆ) ಹಾಗಿದ್ದಲ್ಲಿ ಜಿಲ್ಲಾ ಪರಿಷತ್ ಮೈಸೂರು ಇವರು ತೆಗೆದುಕೊಂಡಿರುವ ಕ್ರಮವೇನು ?

ಇ) ೧೯೮೮–೮೯ನೇ ಸಾಲಿಗೆ ಒದಗಿಸಲಾಗಿರುವ ಹಣವೆಷ್ಟು ? ಈ ರಸ್ತೆಯನ್ನು ಪೂರ್ತಿ ದುರಸ್ತಿ ಪಡಿಸಲು ಬೇಕಾಗಬಹುದಾದ ಹಣವೆಷ್ಟು ?

ಶ್ರೀ ಎಂ. ಪಿ. ಪ್ರಕಾಶ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು).— ಹೌದು

ಕ್ರಮ ತೆಗೆದುಕೊಳ್ಳಲಾಗಿದೆ.

೪೦,೦೦೦–೦೦ ರೂಗಳು ರಸ್ತೆಯನ್ನು ಪೂರ್ತಿ ದುರಸ್ತಿ ಮಾಡಲು ಬೇಕಾಗುವ ಹಣ ೧೭ಲಕ್ಷ ರೂಗಳು.

ಗುಲ್ಬರ್ಗಾನಗರ ನೀರು ಸರಬರಾಜು ಯೋಜನೆ ಭೀಮಾನದಿಯಿಂದ ನೀರು ಪೂರೈಕೆ

೪೯೭ (೭೭೫) ಶ್ರೀ ಧರ್ಮಸಿಂಗ್ (ಜೇವರ್ಗಿ).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ : —

ಆ) ಭೀಮಾನದಿಯನ್ನು ಮೂಲವಾಗಿಟ್ಟುಕೊಂಡು ಗುಲ್ಬರ್ಗಾ ನಗರಕ್ಕೆ ಕುಡಿಯುವ ನೀರನ್ನು ಸರಬರಾಜು ಮಾಡುವ ಅಭಿವೃದ್ಧಿ ಯೋಜನೆಯು ಯಾವ ದಿನಾಂಕದಲ್ಲಿ ಮಂಜೂರಾಗಿದೆ?

ಆ) ಹಾಗಿದಲ್ಲಿ ಯೋಜನೆಯ ಅಂದಾಜು ವೆಚ್ಚವೆಷ್ಟು ?

ಇ) ಈ ಯೋಜನೆಯು ಮಂಜೂರಾದ ದಿನಾಂಕ, ಪ್ರತಿ ವರ್ಷ ಒದಗಿಸಲಾದ ಹಣದ ವಿವರ ಮತ್ತು ವೆಚ್ಚ ಮಾಡಿರುವ ಹಣದ ವಿವರ?

ಈ) ಪರ್ಟ್ ನಕ್ಷೆ ಪ್ರಕಾರ ಯೋಜನೆಯನ್ನು ಕಾರ್ಯರೂಪಕ್ಕೆ ತಂದ ವಿವರಗಳು ಹಾಗೂ ಈ ಕೆಲಸಕ್ಕೆ ಪರ್ಟ್ ನಕ್ಷೆಯಲ್ಲಿ ನಿಗದಿಪಡಿಸಿದ ಗುರಿಯ ಬದಲಾಗಿ ಸಾಧಿಸಿದ ಭೌತಿಕ ಮತ್ತು ಆರ್ಥಿಕ ಪ್ರಗತಿಗಳ ವಿವರ?

ಉ) ಅಡಿಪಾಯ ಹಾಕುವಾಗ ಈ ಯೋಜನೆಯನ್ನು ೨ ವರ್ಷಗಳ ಅವಧಿಯಲ್ಲಿ ಮುಗಿಸಲಾಗುವುದು ಎಂದು ಆಂದಿನ ಮುಖ್ಯಮಂತ್ರಿಗಳು ಆಶ್ವಾಸನೆ ಕೊಟ್ಟಿದ್ದು ನಿಜವಲ್ಲವೇ ?

ಶ್ರೀ ಆರ್. ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಆ) ಭೀಮಾನದಿಯನ್ನು ಮೂಲವಾಗಿಟ್ಟುಕೊಂಡು ಗುಲ್ಬರ್ಗಾ ನಗರಕ್ಕೆ ಕುಡಿಯುವ ನೀರನ್ನು ಸರಬರಾಜು ಮಾಡುವ ಅಭಿವೃದ್ಧಿ ಯೋಜನೆಯು ದಿನಾಂಕ ೨೧–೫–೮೭ರಲ್ಲಿ ಮಂಜೂರಾಗಿದೆ.

ಆ) ಯೋಜನೆಯ ಅಂದಾಜು ವೆಚ್ಚ ೧೨.೮೬ ಕೋಟಿ ರೂಗಳು.

ಇ) ಮಂಜೂರಾದ ದಿನಾಂಕ ೨೧–೫–೧೯೮೭

ವರ್ಷ	ಬಜೆಟ್‌ನಲ್ಲಿ ನಿಗದಿಪಡಿಸಿದ ಮೊತ್ತ ಲಕ್ಷ ರೂಗಳಲ್ಲಿ	ವಿಚ್ಚಾದ ಹಣ ಲಕ್ಷ ರೂಗಳಲ್ಲಿ	ಟಿಪ್ಪಣಿ
೧೯೮೭ರ ವರೆಗೆ		೨೬೪.೦೦	೨೬೧.೦೦ ಲಕ್ಷರೂಗಳನ್ನು ವಿತರಣಾ ವ್ಯವಸ್ಥೆ ಜಲಸಂಗ್ರ
೧೯೮೭–೮೮	೧೪೭–೦೦	೫೯.೫೯	ಹಾಗಾರಗಳು ಮತ್ತು ಸಿಬ್ಬಂದಿ
೧೯೮೮–೮೯	೧೪೦–೦೦	೪೦.೫೫	ಗೃಹಗಳನ್ನು ಕಟ್ಟಲು ಬೆಣ್ಣಿ
	ಒಟ್ಟು	೩೬೦.೯೪ (ಜನವರಿ ೧೯೮೯ರ ವರೆಗೆ)	ತೊರೆ ನದಿಯನ್ನು ಮೂಲವಾಗಿ ಪಡೆದ ಯೋಜನೆಯಡಿಯಲ್ಲಿ ಖರ್ಚು ಮಾಡಲಾಗಿದೆ. ಈ ಕೆಲಸಗಳು ಈಗ ಭೀಮಾ ಯೋಜನೆಯ ಅಂಗವಾಗಿರುತ್ತದೆ.

ಈ) ಭೌತಿಕವಾಗಿ ಈ ಯೋಜನೆಯಲ್ಲಿ ಸಾಧಿಸಿದ ಪ್ರಗತಿಗಳನ್ನು ಅನುಬಂದದಲ್ಲಿ ಕೊಟ್ಟಿದೆ.

ಉ) ಇಲ್ಲ.